

## ಕಲ್ಮರಿಗೆ ಕಂಡೀರಾ?

ಹೆಣ್ಣು ಹೆತ್ತರೆ, ಮಾರೆಮ್ಮ ಮರಿಗೆ ಹೆತ್ತಳು ಅಂತ ಗಾದೆ ಮಾತೊಂದಿದೆ. ಮರಿಗೆ ಎಂದರೆ ಮಣ್ಣಿನ ಪಾತ್ರೆ. ಹಿಂದಿನ ಕಾಲದಲ್ಲಿ ಅಡುಗೆ ತಯಾರಿಸಲು ಮಣ್ಣಿನ ಮಡಿಕೆಗಳಲ್ಲದೇ ಕಲ್ಲಿನ ಪಾತ್ರೆಗಳೂ ಬಳಕೆಯಲ್ಲಿದ್ದವು. ಮಣ್ಣಿನಿಂದ ಮಾಡಿದ್ದು ಮಡಿಕೆ ಅಥವಾ ಮರಿಗೆಯಾದರೆ ಕಲ್ಲಿಂದ ಮಾಡಿದ್ದೇ ಕಲ್ಮರಿಗೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ಈ ಪದ ಹೆಚ್ಚು ಬಳಕೆಯಲ್ಲಿದೆ. ಇದಕ್ಕೆ ಕಲ್ಗಡಿಗೆ ಎಂತಲೂ ಹೆಸರು. ಎಪ್ಪತ್ತರ ದಶಕದಲ್ಲಿ ಅಗ್ಗಿಷ್ಟಿಕೆ ಮೇಲೆ ಕಲ್ಮರಿಗೆಯಲ್ಲಿ ಗೊಡ್ಡು ಸಾರು ಮಾಡಿ ತಿಂದವರು, ಅದರ ರುಚಿಯ ಮೆಲುಕನ್ನು ಈಗಲೂ ಹಾಕುತ್ತಾರೆ.

ಕಲ್ಮರಿಗೆಯ ಹೊರಭಾಗ ಮತ್ತು ಒಳಭಾಗಕ್ಕೆ ಎಣ್ಣೆ ಸವರಿ ಎಳೆಯ ಬಿಸಿಲಿನಲ್ಲಿ ಇಡುವುದರಿಂದ ಬಹುಕಾಲ ಬಾಳಿಕೆ ಬರುತ್ತದೆ. ಅಡುಗೆ ತಯಾರಿಸಲು ಬಳಸುವ ಸಾಮಗ್ರಿಗಳು ಅಂದರೆ ಸ್ಟೀಲ್ ಪಾತ್ರೆ, ಮಣ್ಣಿನ ಪಾತ್ರೆ ಹೀಗೆ ಬೇರೆ ಬೇರೆಯಾದರೂ ಅದರ ರುಚಿ ಬೇರೆನೇ ಆಗಿರುತ್ತದೆ. ಈಗೆಲ್ಲ ತರಹೇವಾರಿ ಅಡುಗೆ ಪಾತ್ರೆಗಳೆಲ್ಲಾ ಬಂದಿರುವುದರಿಂದ ಕಲ್ಮರಿಗೆ ಕಣ್ಮರೆಗೆ ಸರಿದಿದೆ.

–ನಾರಾಯಣ, ಬಾಬಾನಗರ

## ಪಿವಿಸಿ ಪೈಪ್‌ಗಳಲ್ಲಿ ಗಣಪ!

ಪ್ರಾಚೀನರು ಪ್ರಕೃತಿಯ ಆರಾಧಕರು. ನೆಲ, ಜಲ, ಮರ, ಭೂಮಿ, ಸೂರ್ಯ, ಚಂದ್ರ ಇವೆಲ್ಲವನ್ನೂ ದೇವರೆಂದು ಆರಾಧಿಸುತ್ತಿದ್ದರು. ವಿಗ್ರಹಾರಾಧನೆ ರೂಢಿಗೆ ಬಂದ ನಂತರ ಪೂಜಿಸುವ ವಿಧಿ ವಿಧಾನಗಳು ಬದಲಾದವು. ಇದೀಗ ಆಧುನಿಕ ನಾಗರಿಕ ಸಮಾಜದಲ್ಲಿ ಗಣೇಶ ಚತುರ್ಥಿಯಂದು ಪರಿಸರಸ್ನೇಹಿ ವಿಶಿಷ್ಟತೆಯೂ ಸೇರಿದಂತೆ ತರಹೇವಾರಿ ಮೂರ್ತಿಗಳು ಪೂಜಿಸಲ್ಪಡುತ್ತವೆ. ಆದರೆ ಇಲ್ಲೊಬ್ಬ ವ್ಯಾಪಾರಿ ಪಿವಿಸಿ ಪೈಪ್‌ಗಳಲ್ಲೇ ವಿಶಿಷ್ಟವಾಗಿ ಗಣಪನನ್ನು ಸೃಷ್ಟಿಸಿದ್ದಾರೆ.

–ಎಸ್. ಎನ್. ಚಂದ್ರಕಲಾ ಕೊಪ್ಪ, ಚಿಕ್ಕಮಗಳೂರು










## ಸುವ್ವಿ ಹಕ್ಕಿಯ ಮರಿಗಳು!

ನಮ್ಮ ಮನೆಯ ಹಿತ್ತಲಿನ ಪೇರಲ ಗಿಡದಲ್ಲಿ ಎಲೆಗಳಿಂದ ಸುತ್ತುವರಿದ ಬಟ್ಟಲಿನಾಕಾರದ ಗೂಡೊಂದು ಗೋಚರಿಸಿತು. ಹತ್ತಿರ ಹೋಗಿ ನೋಡಿದಾಗ ನಾಲ್ಕು ಇಟ್ಟಿಗೆ ಬಣ್ಣದ ತತ್ತಿಗಳಿದ್ದವು. ವಾರ ಕಳೆದ ಮೇಲೆ ಗೂಡಿನಲ್ಲಿ ಚಿಕ್ಕ ಮರಿಗಳು ಕಂಡವು. ಆಕಾಶ ಆಹಾರ ಕಚ್ಚಿಕೊಂಡು ಬಂದ ಹಕ್ಕಿಯ ಮತ್ತು ಆಹಾರಕ್ಕೆ ಬಾಯ್ದೆರೆದು ಕುಳಿತ ಮರಿಗಳ ಚಿತ್ರ ಕ್ಲಿಕ್ಕಿಸಿದೆ.

ಸುವ್ವಿ ಹಕ್ಕಿಗೆ ಆಂಗ್ಲ ಭಾಷೆಯಲ್ಲಿ ಆ್ಯಸಿ ಪ್ರೀನಿಯಾ ಎನ್ನುವರು. ಇದು ಮ್ಯುಸಿಕ್ಯಾಪಿಡೇ ಕುಟುಂಬಕ್ಕೆ ಸೇರಿದ್ದೂ, ವೈಜ್ಞಾನಿಕವಾಗಿ ಪ್ರೀನಿಯಾ ಸೋಸಿಯಾಲಿಸ್ ಎಂದು ಕರೆಯುವರು. ಗುಬ್ಬಚ್ಚಿಗಿಂತ ಚಿಕ್ಕ ಗಾತ್ರದ ಪಕ್ಷಿ. ಕತ್ತಿನ ಹಿಂಭಾಗ, ರೆಕ್ಕೆ, ಬಾಲದ ಮೇಲ್ಭಾಗದಲ್ಲಿ ಕಡು ಬೂದು ಮಿಶ್ರಿತ ಪಾಚಿ ಬಣ್ಣವಿದೆ. ನೀಳವಾದ ಕಾಲುಗಳು, ಕಪ್ಪು ಕೊಕ್ಕು ಇದೆ. ಕುರುಚಲು ಕಾಡು, ಕೈತೋಟಗಳಲ್ಲಿ ವಾಸಿಸುತ್ತವೆ. ದೊಡ್ಡ ಎಲೆಗಳನ್ನು ಬಟ್ಟಲಿನಾಕಾರದಲ್ಲಿ ಹೆಣೆದು ಅದರೊಳಗೆ ನಾರು, ಹತ್ತಿಯನ್ನು ತುಂಬಿ ಗೂಡು ರಚಿಸುತ್ತವೆ.

–ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು


## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly